**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಸಾಗರ</u>**

**<u>ಸಿ.ಸಿ.ನಂಃ 499/2025</u>**

ಫಿರ್ಯಾದಿ : ಸೆಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ
ಕೋ-ಅಪರೇಟಿವ್ ಲಿಮಿಟೆಡ್, ಇದರ ಪರವಾಗಿ
ವ್ಯವಸ್ಥಾಪಕರಾದ
ಅನಿಲ್ ಕುಮಾರ್ ವಿ. ಬಿನ್ ವೆಂಕಟೇಶ್.

ವಿರುದ್ಧ

ಆರೋಪಿ : ಗೌತಮ್ ಬಿನ್ ಬಾಬು ಹೆಚ್ ಇ

<u>ದಂ.ಪ್ರ.ಸಂ. ಕಲಂ **313** ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>

ಪ್ರಶ್ನೆ ಃ ಫಿರ್ಯಾದಿಯ ಪರವಾಗಿ ವಿಚಾರಣೆಯಾದ ಸಾಕ್ಷ್ಯವನ್ನು ಕೇಳಿಸಿಕೊಂಡಿರುವಿರಾ?
ಉತ್ತರಃ

ಪ್ರಶ್ನೆ ಃ ಪ್ರಾಸಾ.1 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಸಂಸ್ಥೆಯಿಂದ ದಿನಾಂಕ **06-02-2023** ರಂದು ರೂ.**3,50,000/-** ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಬಡ್ಡಿಯನ್ನು ಸೇರಿಸಿ ಮರುಪಾವತಿಸುವುದಾಗಿ ತಿಳಿಸಿರುತ್ತೀರಿ. ಆದರೆ, ಮರುಪಾವತಿ ಮಾಡಬೇಕಾದ ಸಾಲದ ಹಣವನ್ನು ಬಾಕಿ ಉಳಿಸಿಕೊಂಡಿರುತ್ತೀರಿ ಅಂತ ಸಾಕ್ಷಿ ನುಡಿದಿದ್ದಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ ಃ ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನೀವು ಸದರಿ ಸಾಲದ ಬಾಕಿ ಹಣವನ್ನು ಮರುಪಾವತಿ ಮಾಡುವುದಕ್ಕೋಸ್ಕರ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಸಾಗರ ಶಾಖೆಯಲ್ಲಿರುವ **963231** ನಂಬರಿನ ಚೆಕ್ಕನ್ನು ದಿನಾಂಕಃ **05-12-2024** ನ್ನು ನಮೂದಿಸಿ ರೂ. **1,93,355/-** ಗಳಿಗೆ ನೀಡಿದ್ದು ಬ್ಯಾಂಕಿಗೆ ಹಾಜರುಪಡಿಸಿ, ಸಾಲದ ಬಾಕಿ ಉಳಿಸಿಕೊಂಡಿರುವ ಹಣವನ್ನು ಪಡೆದುಕೊಳ್ಳುವಂತೆ ತಿಳಿಸಿದ್ದಾಗಿ ಸಾಕ್ಷಿ ನುಡಿದಿದ್ದಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ ಃ ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನೀಡಿದ ಚೆಕ್ ನ್ನು ಪ್ರಾಸಾ.**1** ರವರ ಸಂಸ್ಥೆಯು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಾಗರ ಶಾಖೆಯ ಮೂಲಕ ನಗಧೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಚಕ್ ನಗದೀಕರಣಗೊಳ್ಳದೆ **(Funds Insufficient)** ಎಂಬ ಹಿಂಬರಹದೊಂದಿಗೆ ದಿನಾಂಕಃ **10-12-2024** ರಂದು ವಾಪಸ್ಸು ಬಂದಿರುವುದಾಗಿ ಸಾಕ್ಷಿ ನುಡಿದಿದ್ದಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ **ಃ** ಪ್ರಾಸಾ**.**1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅವರು ದಿಃ **01–01–2025** ರಂದು ಆರೋಪಿಯಾದ ನಿಮಗೆ ನೊಂದಾಯಿತ ಅಂಚೆಯ ಮೂಲಕ ನೋಟಿಸ್ ಕಳುಹಿಸಿದ್ದು**,** ಸದರಿ ನೋಟಿಸ್ಸನ್ನು ನಿಮಗೆ ದಿನಾಂಕಃ **04-01–2025** ರಂದು ಖುದ್ದಾಗಿ ಜಾರಿಯಾಗಿದ್ದರೂ**,** ನೀವು ಬಾಕಿ ಉಳಿಸಿಕೊಂಡಿದ್ದ ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ**,** ಎಂದು ಹೇಳುತ್ತಾರೆ**.** ಇದಕ್ಕೆ ನೀವೇನು ಹೇಳುವಿರಿ**?**

ಉತ್ತರಃ

ಪ್ರಶ್ನೆ **ಃ** ಪ್ರಾಸಾ**.**1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನಿನ್ನ ಖಾತೆಯಲ್ಲಿ ಹಣ ಇಲ್ಲದೆ ಇದ್ದರೂ ಉದ್ದೇಶಪೂರ್ವಕವಾಗಿ ಅವರಿಗೆ ವಂಚನೆ ಮಾಡುವ ಉದ್ದೇಶದಿಂದಲೇ ಸಾಲದ ಮರುಪಾವತಿಗಾಗಿ ನಗದೀಕರಣವಾಗದ ಚೆಕ್ಕನ್ನು ಅವರಿಗೆ ನೀಡಿರುತ್ತೀಯಾ ಎಂದು ಹೇಳುತ್ತಾರೆ**.** ಇದಕ್ಕೆ ನೀವೇನು ಹೇಳುವಿರಿ**?**

ಉತ್ತರಃ

ಪ್ರಶ್ನೆ **ಃ** ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ**?**

ಉತ್ತರಃ

ಪ್ರಶ್ನೆ **ಃ** ನಿಮ್ಮ ಪರ ಯಾವುದಾದರು ಪ್ರತಿರಕ್ಷೆ ಸಾಕ್ಷಿ ಮಾಡಿಸುತ್ತೀರಾ**?**

ಉತ್ತರಃ

ಮೇಲೆ ಹೇಳಿದ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಆರೋಪಿಗೆ ಓದಿ ಹೇಳಿದ್ದು, ಅವರು ನೀಡಿದ ಉತ್ತರವನ್ನು ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಅಂತಾ ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ

**(ಮಾದೇಶ ಎಂ.ವಿ,.)**
ಪ್ರಧಾನ ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಸಾಗರ